# ಪುಣ್ಯಸ್ಮೃತಿ

ಮೂಲ ಬಂಗಾಳಿ : **ಚಂದ್ರಮೋಹನ ದತ್ತ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೨**

ಬೆಳಗಿನಿಂದ ನಾನು ಏನನ್ನೂ ತಿಂದಿರಲಿಲ್ಲ. ತುಂಬಾ ಹಸಿವೆಯಾಗುತ್ತಿತ್ತು. ಏನಾದರೂ ಖರೀದಿಸಿ ತಿನ್ನೋಣವೆಂದರೆ ಕೈಯಲ್ಲಿ ಹಣವಿಲ್ಲ. ಏನು ಉಳಿದಿತ್ತೋ ಅದು ಎಣ್ಣೆ ಹಾಗೂ ಗಂಗಾಜಲಕ್ಕಾಗಿ ಖರ್ಚಾಯಿತು. ಒಂದು ಕಿರಾಣಿ ಅಂಗಡಿಯಿಂದ ಭಿಕ್ಷೆ ಬೇಡಿ ಅಕ್ಕಿ ಪಡೆದೆ, ಅದನ್ನು ನೀರಿನೊಂದಿಗೆ ತಿಂದೆ. ಅದರಿಂದ ಹಸಿವೆ ತುಸು ಶಾಂತವಾಯಿತು. ಕೆಲಸ ಹುಡುಕುತ್ತ ಕೆಲವು ಅಂಗಡಿಗಳಲ್ಲಿ ಮತ್ತು ಆಫೀಸುಗಳಲ್ಲಿ ಅಲೆದೆ. ಎಲ್ಲೂ ಕೆಲಸ ಸಿಗಲಿಲ್ಲ. ಕೊನೆಗೆ ಕೆಲಸ ಸಿಗುವ ಆಸೆ ಬಿಟ್ಟು, ನಿಮ್‌ತಲಾ ಘಾಟ್‌ನಲ್ಲಿ ಬಂದು ಕುಳಿತೆ. 'ಏನು ಮಾಡಲಿ'? ಎಂದು ಚಿಂತಿಸತೊಡಗಿದೆ. ಬೇಲೂರು ಮಠಕ್ಕೆ ಹೋಗಿದ್ದಾಗ ಕೇಳಿದ್ದೆ, ತೊಂದರೆಯಲ್ಲಿರುವವರಿಗೆ ರಾಮಕೃಷ್ಣ ಮಿಷನ್ ಸಹಾಯ ಮಾಡುತ್ತದೆ — ಎಂದು. ನಾನಂತೂ ಈಗ ತೊಂದರೆಗೆ ಒಳಗಾಗಿಯೇ ಇದ್ದೇನೆ. ನನಗೊಂದು ಕೆಲಸವೂ ಇಲ್ಲ, ಕೈಯಲ್ಲಿ ಒಂದು ಪೈಸೆ ಕೂಡ ಇಲ್ಲ, ಊಟಕ್ಕೆ-ವಾಸಕ್ಕೆ ವ್ಯವಸ್ಥೆ ಇಲ್ಲ. ನಾನೇನು ಕೇಳಿದ್ದೇನೋ ಅದು ನಿಜವಾಗಿದ್ದರೆ, ರಾಮಕೃಷ್ಣ ಮಿಷನ್ ನನಗೆ ಒಂದು ವ್ಯವಸ್ಥೆಯನ್ನು ಖಂಡಿತ ಮಾಡಿಕೊಡಬಹುದು. ನಾನು ಬೇಲೂರು ಮಠಕ್ಕೆ ಹೋಗಿದ್ದೇನೆ. ಬೇಲೂರು ಮಠವೇ ರಾಮಕೃಷ್ಣ ಮಿಷನ್ನಿನ ಹೆಡ್ ಆಫೀಸ್ ಎಂಬುದನ್ನು ಕೇಳಿದ್ದೇನೆ. ಆದರೆ ಬೇಲೂರು ಮಠವಲ್ಲದೆ ಇನ್ನೆಲ್ಲಾದರೂ ರಾಮಕೃಷ್ಣ ಮಿಷನ್ನಿನ ಶಾಖೆ ಇದೆಯೇ ಇಲ್ಲವೇ ಎಂಬುದು ನನಗೆ ತಿಳಿಯದು. ಮುಳುಗುತ್ತಿರುವ ನಾನು ಹುಲ್ಲುಕಡ್ಡಿಯನ್ನಾದರೂ ಹಿಡಿದುಕೊಂಡು ಪ್ರಾಣವನ್ನುಳಿಸಿಕೊಳ್ಳಲು ಬಯಸಿದ್ದೆ. ಶ್ರೀರಾಮಕೃಷ್ಣರ ನಾಮವನ್ನೇ ಆಧರಿಸಿ, ರಾಮಕೃಷ್ಣ ಮಿಷನನ್ನು ಹುಡುಕುತ್ತಾ ನಡೆಯತೊಡಗಿದೆ. ದಾರಿಯಲ್ಲಿ ಸಿಕ್ಕಿದ ವ್ಯಕ್ತಿಯನ್ನು ಕೇಳಿದೆ, ರಾಮಕೃಷ್ಣ ಮಿಷನ್ ಎಲ್ಲಿದೆ — ಎಂದು. ಯಾರಿಗೂ ಸರಿಯಾಗಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ನಾನು ಕೇಳುತ್ತಾ ಮುಂದೆ ಸಾಗುತ್ತಿದ್ದೆ. ಅಷ್ಟರಲ್ಲಿ ಸಂಭಾವಿತ ವ್ಯಕ್ತಿಯೊಬ್ಬರು, ''ಬಾಗ್‌ಬಜಾರಿನಲ್ಲಿ ರಾಮಕೃಷ್ಣ ಮಿಷನ್ನಿನ ಒಂದು ಶಾಖೆಯಿದೆ. ಅದರ ಹೆಡ್ ಆಫೀಸು ಬೇಲೂರು ಮಠ'' ಎಂದರು. ಆಸೆಯ ಬೆಳಕು ನನ್ನಲ್ಲಿ ಮೂಡಿತು. ಬಾಗ್‌ಬಜಾರ್‌ಗೆ ಬಂದು, ಅಲ್ಲಿ ಒಬ್ಬರನ್ನು ಕೇಳಿದಾಗ ಅವರು, ''ರಮಾಕಾಂತ ಬಸು ಸ್ಟ್ರೀಟ್‌ನಲ್ಲಿ ಬಲರಾಮ ಬಸು ಅವರ ಮನೆಯಲ್ಲಿ ಕೆಲವು ಮಂದಿ ಸಾಧುಗಳು ವಾಸವಾಗಿದ್ದಾರೆ. ಅವರ ಬಳಿ ಹೋಗಿ ಕೇಳಿದರೆ ಅವರು ಹೇಳಿಯಾರು'' ಎಂದರು. ರಮಾಕಾಂತ ಬಸು ಸ್ಟ್ರೀಟ್‌ನಲ್ಲಿ ನನ್ನ



ಬಂಧುವೊಬ್ಬನಿದ್ದನು. ಅವನು ನನ್ನನ್ನು ಗುರುತಿಸಬಾರದೆಂದು ನನ್ನ ತಲೆಗೆ ನಾನು ರುಮಾಲು ಸುತ್ತಿಕೊಂಡೆ. ಆಗ ಗಂಟೆ ಸುಮಾರು ೧೧-೧೨ ಇದ್ದಿರಬಹುದು. ಬಂಧುಗಳ ಮನೆಯ ಪಕ್ಕದಲ್ಲೇ ನಾನು ಹೋಗುತ್ತಿರಬೇಕಾದರೆ ರಾಜೇಂದ್ರನು (ನನ್ನ ಸಣ್ಣ ತಂಗಿ ಸ್ನೇಹಲತಾಳ ಗಂಡ ರಾಜೇಂದ್ರದಾಸ್, ಅವನ ಮಗನ ಹೆಸರು ಬಂಕಿಮ) ೩-೪ ಸೇರು ಮಾಂಸವನ್ನು ತೆಗೆದುಕೊಂಡು ಹೋಗುತ್ತಿದ್ದ. ರಾಜೇಂದ್ರನ ಪರಿಸ್ಥಿತಿ ಚೆನ್ನಾಗಿತ್ತು — ಬಡೋ ಬಜಾರಿನಲ್ಲಿ ಮಸಾಲೆಯ ಅಂಗಡಿ ಇಟ್ಟಿದ್ದ. ಬಲರಾಮ ಬಸುವಿನ ಮನೆಯ ಸಮೀಪ ಹೋಗಿ ನೋಡಿದಾಗ ಅಲ್ಲೊಬ್ಬ ಹಿಂದೂಸ್ಥಾನಿ ಕಾವಲುಗಾರ ಸ್ಟೂಲೊಂದರ ಮೇಲೆ ಕುಳಿತಿದ್ದ. ನಾನು ಅವನಿಗೆ ಹೇಳಿದೆ: ''ನಾನು ಸಾಧುಗಳನ್ನು ಭೇಟಿಯಾಗಬೇಕು.'' ಅವನು ಕೇಳಿದ —''ಕೌನ್ ಸಾಧುಕಾ ಪಾಸ್ ಜಾಯೇಗಾ?''(ಯಾವ ಸಾಧುಗಳ ಬಳಿಗೆ ಹೋಗಬೇಕು?) ನನಗೆ ಯಾವ ಸಾಧುಗಳು ಪರಿಚಯವೂ ಇಲ್ಲ. ಯಾರ ಹೆಸರೂ ಗೊತ್ತಿಲ್ಲ. ಆದ ಕಾರಣ ಯಾವ ಸಾಧುಗಳ ಹೆಸರನ್ನೂ ಹೇಳಲಾಗಲಿಲ್ಲ. ನಾನೆಂದೆ, ''ಯಾರಾದರೂ ಒಬ್ಬರು ಸಾಧುಗಳನ್ನು

ಭೇಟಿಯಾದರೆ ಸಾಕು.'' ಅವನು ನನ್ನ ಅಡ್ಡಾದಿಡ್ಡಿ ಆಕಾರವನ್ನು ಕಂಡು, ಯಾರೋ ತಿರುಕುಳಿ ಇವನು ಎಂದುಕೊಂಡು ಹೇಳಿದ, ''ನಹೀಂ ಹೋಗಾ! ಭಾಗೋ, ಇಹಾಂಸೆ ಭಾಗೋ!'' ಸ್ತಂಭ ಗಳಿರುವ ದೊಡ್ಡ ಮನೆಗಳನ್ನು ನೋಡಿದರೂ ನನಗೆ ಭಯವಾ ಗುತ್ತಿತ್ತು; ಅದರ ಮೇಲಿಂದ ಈಗ ಆನೆಕಾಲು ರೋಗದ ಮೇಲೆ ಗುಳ್ಳೆ ಎದ್ದ ಹಾಗಾಯಿತು. ಲಾಠಿ ಹಿಡಿದುಕೊಂಡು ಹಿಂದೂ ಸ್ಥಾನೀ ಕಾವಲುಗಾರ ಕಠೋರವಾಗಿ ಕೂಗಾಡಿದಾಗ, ಇನ್ನು ಮುಂದುವರಿಯುವುದು ಬುದ್ಧಿವಂತಿಕೆಯ ಕೆಲಸವಲ್ಲ ಎಂದು ಭಾವಿಸಿದೆ.

ನನ್ನ ಅವಸ್ಥೆಯನ್ನು ಕಂಡು, ಸ್ಥಳೀಯ ವ್ಯಕ್ತಿಯೊಬ್ಬನಿರ ಬೇಕು, ಹೇಳಿದ, ''— ನೀವು ನಂ.೧, ಮುಖರ್ಜಿ ಲೇನ್‌ಗೆ[೧] ಹೋಗಿ; ಅಲ್ಲಿ ರಾಮಕೃಷ್ಣ ಮಿಷನ್ನಿನ ಶಾಖೆಯಾದ 'ಉದ್ಬೋಧನ ಕಾರ್ಯಾಲಯ'ವಿದೆ.'' ಆ ವ್ಯಕ್ತಿ ಹೇಳಿದಂತೆ ಸ್ವಲ್ಪ ದೂರ ನಡೆಯುತ್ತಲೇ ಒಂದು ಮನೆಯನ್ನು ನೋಡಿದೆ. ಅದು ಎರಡಂತಸ್ತಿನ ಮನೆ. ಬಾಗಿಲ ಪಕ್ಕದಲ್ಲೇ ಬರೆದಿತ್ತು , 'ಉದ್ಬೋಧನ ಕಾರ್ಯಾಲಯ'. ಬಾಗಿಲ ಎರಡೂ ಬದಿಗಳಲ್ಲಿ ಕೆಂಪು ಬಣ್ಣದ, ಸಿಮೆಂಟಿನ ವರಾಂಡಗಳಿದ್ದವು. ಅಲ್ಲಿ ಯಾರೂ ಕಾಣಿಸಲಿಲ್ಲ. ಕಾರ್ಯಾಲಯ ಅದೇ ಎಂದು ಗೊತ್ತಾದರೂ, ಒಳಗೆ ಹೋಗಲು ಧೈರ್ಯವಾಗಲಿಲ್ಲ. ಕಾರಣ, ಬಲರಾಮ ಬಸುವಿನ ಮನೆಯ ಕಾವಲುಗಾರನಿಂದ ಎಂಥ ಸ್ವಾಗತ ನನಗೆ ಸಿಕ್ಕಿತೋ ಅದನ್ನು ಈ ಸಂದರ್ಭದಲ್ಲೂ ನಾನು ಮರೆತಿರಲಿಲ್ಲ. ಅಲ್ಲಿ ನನ್ನ ಎದೆ ಢವಢವ ಎನ್ನುತ್ತಿದ್ದುದು ಇನ್ನೂ ಕಡಿಮೆಯಾಗಿಲ್ಲ. ಯಾರಾದರೂ ಕಾಣಿಸಿಕೊಳ್ಳುವರೋ ಎಂಬ ನಿರೀಕ್ಷೆ ಮಾಡುತ್ತ ವರಾಂಡದಲ್ಲಿ ಕುಳಿತೆ. ಒಬ್ಬ ವ್ಯಕ್ತಿ ಹೊರಗೆ ಬಂದ (ಅವನ ಹೆಸರು'ಮೋಹನ' ಎಂಬುದಾಗಿ ಅನಂತರ ತಿಳಿದುಬಂತು); ಅವನನ್ನು ಕೇಳಿದೆ —''ಈ ಮನೆ ರಾಮಕೃಷ್ಣ ಮಿಷನ್ನಿನ ಕಛೇರಿಯೆ?'' ಮೋಹನ ಹೇಳಿದ, ''ಹೌದು, ರಾಮಕೃಷ್ಣ ಮಿಷನ್, ಇಲ್ಲಿ ಶ್ರೀಮಾತೆ ವಾಸವಾಗಿದ್ದಾರೆ, ಸಂನ್ಯಾಸಿಗಳೂ ಇದ್ದಾರೆ. ನಿಮಗೇನು ಬೇಕು?'' ಆತ ತುಂಬ ವಿನಯಶಾಲಿಯಾಗಿದ್ದ. ಆ ಕಾವಲುಗಾರನಂತಿಲ್ಲ ಈತ ಎಂದು ಕಂಡುಬಂದದ್ದರಿಂದ ನಾನು ಕೇಳಿದೆ: ''ಇಲ್ಲಿ ಎಲ್ಲರಿಗಿಂತ ಹಿರಿಯರು ಯಾರೋ ಅವರನ್ನು ನಾನು ಭೇಟಿಯಾಗಬಹುದೆ?'' ನನ್ನನ್ನು ಅಲ್ಲೇ ಕಾಯುವಂತೆ ಹೇಳಿ ಮೋಹನ ಒಳಕ್ಕೆ ಹೋದ. ಸ್ವಲ್ಪ ಹೊತ್ತಿನ ನಂತರ ಮರಳಿ ಬಂದ ಅವನು ನನಗೆ ಹೇಳಿದ: ''ಬನ್ನಿ, ಶ್ರೀಮಾತೆ ನಿಮ್ಮನ್ನು ಕರೆದುಕೊಂಡು ಬರಲು ಹೇಳಿದ್ದಾರೆ.'' 'ಶ್ರೀಮಾತೆ ' ಕರೆದುಕೊಂಡು ಹೋಗಲು ಹೇಳಿದ್ದಾರೆ ಎಂಬುದನ್ನು ಕೇಳಿ ನಾನು ಅವಕ್ಕಾದೆ. ಇಲ್ಲಿ ಸಂನ್ಯಾಸಿಗಳು ವಾಸವಾಗಿದ್ದಾರೆ ಎಂದು ಕೇಳಿದ್ದೆ. ಈಗ ಕೇಳಿದೆ, ಮಹಿಳೆಯರೂ ವಾಸವಾಗಿದ್ದಾರೆ ಎಂದು! ಇದರ ಗುಟ್ಟೇನು ಎಂದು ಸರಿಯಾಗಿ ಅರ್ಥವಾಗುತ್ತಿಲ್ಲವಲ್ಲ — ಹೀಗೆಲ್ಲ ನಾನು ಯೋಚಿಸಿದೆ. ನನ್ನ ಎದೆ ಇನ್ನಷ್ಟು ಢವಢವ ಹೊಡೆದುಕೊಳ್ಳಲಾರಂಭಿಸಿತು. ಇರಲಿ, ಮೋಹನನೊಂದಿಗೆ 'ಶ್ರೀಮಾತೆ'ಯವರ ಬಳಿಗೆ ಹೋದೆ. ಅವರನ್ನು ಮೊದಲ ಬಾರಿ ನೋಡಿದಾಗಲೇ ಅವರು ನನಗೆ ತುಂಬ ಆತ್ಮೀಯರಂತೆ ಅನ್ನಿಸತೊಡಗಿತು. ಅವರ ಕಣ್ಣುಗಳು ಎಷ್ಟೊಂದು ಶಾಂತವಾಗಿದ್ದವು! ಅವುಗಳಿಂದ ಕರುಣೆ ಉಕ್ಕಿಬರುವಂತಿತ್ತು . ನಾನು ಶ್ರೀಮಾತೆಯವರಿಗೆ ಪ್ರಣಾಮ ಮಾಡಿದೆ. ಅವರು ನನ್ನ ತಲೆಯನ್ನು ಸ್ಪರ್ಶಿಸಿದರು. ನನ್ನ ಹೆಸರೇನು, ಮನೆಯೆಲ್ಲಿ, ಮನೆಯಲ್ಲಿ ಯಾರೆಲ್ಲ ಇದ್ದಾರೆ ಎಂದೆಲ್ಲ ಕೇಳಿದರು. ಮಾತಿನ ಮಧ್ಯೆ ಅವರಲ್ಲಿ ಅದೆಂಥ ಆತ್ಮೀಯತೆ ಉಂಟಾಯಿತೆಂದರೆ, ಅವರು ನನ್ನನ್ನು ಮಂತ್ರಮುಗ್ಧರನ್ನಾಗಿಸಿಬಿಟ್ಟರು; ನನ್ನಿಂದ ಎಲ್ಲವನ್ನೂ ಕೇಳಿ ತಿಳಿದುಕೊಂಡುಬಿಟ್ಟರು. ಬೆಳಗಿನಿಂದ ನಾನು ಏನೇನು ಮಾಡಿದ್ದೆ ಎಲ್ಲವನ್ನೂ ಹೇಳಿಬಿಟ್ಟೆ. ದೊಡ್ಡಣ್ಣನ ವಿಚಾರ ಹೇಳಬಾರದು ಎಂದುಕೊಂಡಿದ್ದೆ, ಏಕೆಂದರೆ ಮನೆಯ ವಿಷಯಗಳನ್ನು ಹೊರಗೆಲ್ಲೂ ಹೇಳಬಾರದು ಎಂದು. ಆದರೆ ನನಗೆ ಶ್ರೀಮಾತೆಯವರು ಅನ್ಯರೆಂದು ಅನ್ನಿಸಲಿಲ್ಲ; ನನ್ನ ಸ್ವಂತ ತಾಯಿಗಿಂತಲೂ ಇವರೇ ಹೆಚ್ಚು ನನ್ನವರು ಅನ್ನಿಸಿತ್ತು ಆ ಕ್ಷಣದಲ್ಲಿ! ಆದಕಾರಣ ದೊಡ್ಡಣ್ಣನ ವಿಷಯವನ್ನು ಅವರ ಬಳಿ ಹೇಳಲು ನಾನು ಹಿಂದೆ ಮುಂದೆ ನೋಡಲಿಲ್ಲ. ಎಲ್ಲವನ್ನೂ ಕೇಳಿದ ಶ್ರೀಮಾತೆಯವರು ನನ್ನತ್ತ ನೋಡುತ್ತ ಪ್ರೀತಿಯಿಂದ ಹೇಳಿದರು: ''ನೀನು ಎಲ್ಲ ಬಗೆಯ ಕೆಲಸವನ್ನೂ ಮಾಡಬಲ್ಲೆಯಾ? ಅಥವಾ ಅದು ನಿನ್ನ ಮಾನ, ಮರ್ಯಾದೆಗೆ ಬಾಧೆಯುಂಟುಮಾಡುವುದೆ?'' ನಾನೆಂದೆ, ''ನಾನು ನನ್ನ ತಾಯಿ ಕೆಲಸ ಮಾಡುತ್ತೇನೆ. ಇಲ್ಲಿ ಮಾನ, ಮರ್ಯಾದೆಯ ಪ್ರಶ್ನೆ ಎಲ್ಲಿ ಬರುತ್ತದೆ!'' ಆಗ ಶ್ರೀಮಾತೆ ಹೇಳಿದರು, ''ಇಲ್ಲಿ ನನ್ನ ಕೆಲವು ಮಂದಿ ಸಂನ್ಯಾಸಿ ಮಕ್ಕಳು ಹಾಗೂ ನಾವು ಸ್ವಲ್ಪ ಮಂದಿ ಹೆಂಗಸರು ವಾಸಿಸುತ್ತಿದ್ದೇವೆ. ಸಾಮಾನು ಕೊಂಡುಕೊಳ್ಳಲು ಒಬ್ಬ ವ್ಯಕ್ತಿಯ ಅಗತ್ಯ ನಮಗಿದೆ. ಆದರೆ ಒಬ್ಬನನ್ನು ನೇಮಕ ಮಾಡುವ ಕೆಲಸ ನನ್ನ ಮಗ ಶರತ್ (ಸ್ವಾಮಿ ಶಾರದಾನಂದರು)ನದು. ನೀನು ಮೋಹನನೊಂದಿಗೆ ಶರತ್‌ನ ಬಳಿಗೆ ಹೋಗು.'' ಶ್ರೀಮಾತೆಯವರು ಹೇಳಿದಂತೆ ಮೋಹನ ನನ್ನನ್ನು ಒಬ್ಬರು ಬಲಿಷ್ಠವಾದ ದೇಹದಿಂದಕೂಡಿದ, ಕಪ್ಪು ಮೈ ಬಣ್ಣದ, ಗಂಭೀರ ಭಾವದಿಂದಿದ್ದ ಸಂನ್ಯಾಸಿಗಳ ಬಳಿಗೆ ಕರೆದುಕೊಂಡು ಹೋಗಿ, ''ಮಹಾರಾಜ್, ಶ್ರೀಮಾತೆ ಇವರನ್ನು ನಿಮ್ಮ ಬಳಿಗೆ ಕರೆದುಕೊಂಡು ಬರಲು ಹೇಳಿದ್ದಾರೆ. ಯೋಗ್ಯವೆಂದು ಕಂಡುಬಂದಲ್ಲಿ ಇವರಿಗೆ ಬಜಾರಿನಿಂದ ಸಾಮಾನು ಕೊಂಡುಕೊಳ್ಳುವ ಕೆಲಸ ಕೊಟ್ಟು ಇಲ್ಲಿ ಇಟ್ಟುಕೊಳ್ಳಬಹುದು ಎಂದು ಶ್ರೀಮಾತೆ ಹೇಳಿದ್ದಾರೆ''ಎಂದ. ಆಗ ಮಹಾರಾಜ್ ನಗುತ್ತ , ''ನಾನು ಇನ್ನೇನು ಇಟ್ಟುಕೊಳ್ಳುವುದು, ನೀನು ಉದ್ಯೋಗದ ಪತ್ರದೊಂದಿಗೇ ಬಂದಿದ್ದೀಯಲ್ಲ ?'' ಎಂದರು. ಮಹಾರಾಜ್ ನನ್ನತ್ತ ನೋಡುತ್ತ ಕೇಳಿದರು, ''ಏನು ಮಗು,

[೧] ಈಗ ಮುಖರ್ಜಿ ಲೇನ್ ಹೆಸರು 'ಉದ್ಬೋಧನ ಲೇನ್' ಎಂದು ಬದಲಾಗಿದೆ.

ನಿನಗೇನು ಬೇಕು?'' ಅಷ್ಟೊಂದು ದೊಡ್ಡ ದೇಹದ, ಗಂಭೀರ ಭಾವದ ವ್ಯಕ್ತಿಯಿಂದ ಎಂಥ ಗಂಭೀರ ಧ್ವನಿಯನ್ನು ನಾನು ನಿರೀಕ್ಷಿಸಿದ್ದೆ — ಆದರೆ ಈಗ ನೋಡಿದರೆ ಅವರ ಧ್ವನಿ ಹಾಗಿರಲಿಲ್ಲ, ಹೆಂಗಸರ ಕಂಠದಂತಿತ್ತು! ನನಗೆ ಮಹಾರಾಜರ ಪ್ರಶ್ನೆಗೆ ಉತ್ತರ ನೀಡಲಾಗಲಿಲ್ಲ. ಏನೆಂದು ಉತ್ತರ ಕೊಡಲಿ? ನನಗೆ ಕೆಲಸ ಸಿಕ್ಕಿತೆಂಬುದನ್ನು ಊಹಿಸಲೂ ಸಾಧ್ಯವಾಗುತ್ತಿರಲಿಲ್ಲ. ಸಂನ್ಯಾಸಿಗಳ ಜೊತೆಯಲ್ಲಿ ವಾಸ ಮಾಡಬೇಕು — ಈ ಆಸೆ ಇಷ್ಟು ಬೇಗ ಸತ್ಯವಾಗುವುದೆಂದು ನನಗೆ ಊಹೆ ಮಾಡಲಾಗಲಿಲ್ಲ. ಈ ಕಾರಣದಿಂದ ನನಗೆ ಏನು ಮಾಡಬೇಕೋ ತಿಳಿಯದೆ ದಿಙ್ಮೂಢನಾಗಿ ನಿಂತುಬಿಟ್ಟಿದ್ದೆ. ಮಹಾರಾಜ್ ಮತ್ತೆ ಕೇಳಿದರು: ''ಏನಾಯಿತು? ಯಾಕೆ ಸುಮ್ಮನಾದೆ?'' ಅದಕ್ಕೆ ಉತ್ತರವೇನೆಂದು ಕೊಡಲಿ — ಇನ್ನೂ ನನ್ನ ಸಹಜಾವಸ್ಥೆಗೆ ನಾನು ಮರಳಿರಲಿಲ್ಲ. ಮಹಾರಾಜ್ ಅದೇ ಪ್ರಶ್ನೆಯನ್ನು ಮತ್ತೆ ಕೇಳದೆ, ಸ್ವಲ್ಪ ಹೊತ್ತು ನನ್ನನ್ನೇ ನೋಡುತ್ತ ನಿಂತರು. ಅನಂತರ ಕಿಶೋರಿ ಎಂಬಾತನನ್ನು ಕರೆದು, ''ನಿಮಗೆ ಒಬ್ಬ ವ್ಯಕ್ತಿ ಬೇಕಾಗಿತ್ತು ಎಂದಿದ್ದಿರಲ್ಲ, ಈ ವ್ಯಕ್ತಿಗೆ ಓದು-ಬರಹ ಎಲ್ಲ ಹೇಳಿಕೊಟ್ಟರೆ ಇವನು ಕೆಲಸ ಮಾಡಿಯಾನು'' ಎಂದರು. ಅಂದಿನಿಂದ ನಾನು ಶ್ರೀಮಾತೆಯವರ ಬಳಿ ಆಶ್ರಯ ಪಡೆದೆ. ಈ ಜೀವನದಲ್ಲಿ ಇನ್ನು ಮುಂದೆ ಅವರ ಪಾದಗಳನ್ನು ತೊರೆಯಲಿಲ್ಲ.

ಕೆಲಸ ಸಿಕ್ಕಿತು. ತಿಂಗಳಿಗೆ ಹತ್ತು ರೂಪಾಯಿ ಸಂಬಳ. ದಿನವೂ ಮೋಹನನನ್ನು ಕರೆದುಕೊಂಡು ಪೇಟೆಗೆ ಹೋಗುತ್ತಿದ್ದೆ. ಕೆಲವು ದಿವಸ ಹೀಗೆ ಸಾಮಾನು ಖರೀದಿ ಮಾಡುವ ಕೆಲಸ ಮಾಡಿದ ನಂತರ, ಮಹಾರಾಜ್ ನನಗೆ 'ಉದ್ಬೋಧನ'ದಲ್ಲಿ ಪುಸ್ತಕಗಳನ್ನು ಪ್ಯಾಕ್ ಮಾಡುವ ಹಾಗೂ ಮಾರಾಟ ಮಾಡುವ ಕೆಲಸ ಕೊಟ್ಟರು.

ಆಗ ಬಂಗಾಳದ ಕೆಲವು ಪ್ರದೇಶಗಳಲ್ಲಿ ರಾಮಕೃಷ್ಣ ಮಿಷನ್ ಆಶ್ರಮ ಆರಂಭವಾಗಿದ್ದವು. ಈ ಆಶ್ರಮಗಳಲ್ಲಿ ಶ್ರೀರಾಮಕೃಷ್ಣರ, ಸ್ವಾಮೀಜಿಯವರ ಜಯಂತಿ ನಡೆಯುವಾಗಲೆಲ್ಲ ನಾನು 'ಉದ್ಬೋಧನ'ದ ಪುಸ್ತಕಗಳನ್ನು ಕೊಂಡೊಯ್ದು ಮಾರಾಟ ಮಾಡುತ್ತಿದ್ದೆ. ಹಮಾಲಿ ಪಾಂಚು ಪುಸ್ತಕಗಳನ್ನು ಒಯ್ಯುತ್ತಿದ್ದ. ಪಾಂಚು ಇಲ್ಲದಿದ್ದಾಗ ನಾನೇ ಪುಸ್ತಕದ ಪ್ಯಾಕೇಟುಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಿದ್ದೆ. ಬೇರೆ ಹಮಾಲಿ ಅಥವಾ ಆಟೋರಿಕ್ಷಾ ಬಳಸುತ್ತಿರಲಿಲ್ಲ. ತುಂಬಾ ದೂರ ಹೋಗುವುದಿದ್ದರೆ ಮಾತ್ರ ಬೇರೆ ವ್ಯವಸ್ಥೆ ಮಾಡಬೇಕಿತ್ತು. ಇಲ್ಲದಿದ್ದರೆ ಅದಕ್ಕಾಗಿ ಮಠದ ಹಣವನ್ನು ನಾನು ಖರ್ಚು ಮಾಡುತ್ತಿರಲಿಲ್ಲ. ಎಷ್ಟು ಹಣ ಉಳಿತಾಯವಾಗುತ್ತದೋ ಅಷ್ಟು ಕೂಡ ಮಿಷನ್ ಕೆಲಸಕ್ಕಾಗಿಯೇ ಉಪಯೋಗವಾದೀತೆಂದು. ಅಷ್ಟರಲ್ಲಿ ನಾನು ಕರುಣಾಮಯಿ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದೆ. ಈಗ 'ಉದ್ಬೋಧನ' ಕೇವಲ ನನ್ನ ಕಾರ್ಯಕ್ಷೇತ್ರವಷ್ಟೇ ಅಲ್ಲ, ನನ್ನ ಗುರುನಿವಾಸವೂ ಆಗಿದೆ. ಗುರುನಿವಾಸದ ಮೋರಿಯನ್ನು ಸ್ವಚ್ಛಗೊಳಿಸುವುದು ಕೂಡ ಒಂದು ಪುಣ್ಯದ ಕೆಲಸ ಎಂದೇ ನಾನು ಭಾವಿಸಿದ್ದೇನೆ. ಹೀಗಾಗಿ, ಪುಸ್ತಕಗಳ ಹೊರೆಯನ್ನು ಹೆಗಲ ಮೇಲೆ ಹೊತ್ತು ಸಾಗುತ್ತಿದ್ದಾಗ ನಾನು ಶ್ರೀಮಾತೆಯವರ ಶ್ರೀಚರಣಗಳನ್ನು ಹೆಗಲ ಮೇಲೆ ಹೊತ್ತು ಒಯ್ಯುತ್ತಿದ್ದೇನೆ ಎಂದೇ ಭಾವಿಸುತ್ತಿದ್ದೆ. ಶ್ರೀಮಾತೆ ನನಗೆ ಜಪ ಮಾಡುವುದಕ್ಕಾಗಿ ಒಂದು ರುದ್ರಾಕ್ಷಿ ಮಾಲೆಯನ್ನು ತಮ್ಮ ಕೈಯಿಂದಲೇ ಪವಿತ್ರಗೊಳಿಸಿ ಕೊಟ್ಟರು[೨]. ಆ ಮಾಲೆಯಲ್ಲೇ ನಾನು ಪ್ರತಿದಿನ ಜಪ ಮಾಡುತ್ತಿದ್ದೇನೆ.

ನಾನು ಶ್ರೀಮಾತೆಯವರಿಗಾಗಿ ಏನೇನೋ ಸಣ್ಣಪುಟ್ಟ ಕೆಲಸಗಳನ್ನೂ ಮಾಡಿಕೊಡುತ್ತಿದ್ದೆ. ಯಾವಾಗ ಬೇಕೆಂದರೆ ಆಗ ನಾನು ಶ್ರೀಮಾತೆಯವರ ಬಳಿಗೆ ಹೋಗಬಹುದಾಗಿತ್ತು. ಅವರ ಬಳಿ ನನಗೆ ಯಾವುದೇ ಸಂಕೋಚವಿರುತ್ತಿರಲಿಲ್ಲ; ಅವರು ನನ್ನೊಂದಿಗೆ ಏನೂ ಸಂಕೋಚವಿಲ್ಲದೆ ಮಾತನಾಡುತ್ತಿದ್ದರು. ಶ್ರೀಮಾತೆಯವರಿಗೆ ನನ್ನ ಮೇಲೆ ವಿಶೇಷ ಪ್ರೀತಿಯಿತ್ತು. ಏನಾದರೂ ಕೆಲಸವಿರಲಿ, ಇಲ್ಲದಿರಲಿ ಅವರು ನನ್ನನ್ನು ಕರೆದು ಏನೇನು ಹೇಳುತ್ತಿದ್ದರೋ, ಅದನ್ನು ಪಾಲಿಸುವುದರಲ್ಲೇ ನನಗೆ ತುಂಬಾ ಆನಂದವಾಗುತ್ತಿತ್ತು. ನಾನು ಕೃತಾರ್ಥನಾದೆನೆಂದು ಮನಸ್ಸಿನಲ್ಲಿ ಭಾವಿಸುತ್ತಿದ್ದೆ. ಒಂದು ದಿನ ಶ್ರೀಮಾತೆ ನನಗೆ ಹೇಳಿದರು: ''ಚಂದು, (ಶ್ರೀಮಾತೆ ನನ್ನನ್ನು ಸ್ನೇಹದಿಂದ 'ಚಂದು' ಎಂದೇ ಕರೆಯುತ್ತಿದ್ದರು) ನಿನ್ನಿಂದ ನಾನು ಈ ಕೆಲಸಗಳನ್ನು ಏಕೆ ಮಾಡಿಸುತ್ತಿದ್ದೇನೆ ಗೊತ್ತೆ? ನಾನು ಇಲ್ಲದಿದ್ದಾಗ ಈ ಕೆಲಸಗಳನ್ನೆಲ್ಲ ನೆನೆದು ನಿನಗೆ ಶಾಂತಿ ಲಭಿಸುವುದು, ಅದಕ್ಕೆ.'' ಒಂದು ದಿನ ಮಾತಿನ ನಡುವೆ ಅವರೆಂದರು, ''ನನ್ನ ಮಕ್ಕಳಿಗೆ ಮತ್ತೆ ಜನ್ಮವುಂಟಾಗದು. ನಿನಗೂ ಮತ್ತೆ ಜನ್ಮವಿಲ್ಲ. ಇದೇ ನಿನ್ನ ಕೊನೆಯ ಜನ್ಮ.'' ಇದನ್ನು ಕೇಳಿ ನನಗೆ ಏನೊಂದನ್ನೂ ಹೇಳಲಾಗಲಿಲ್ಲ. ಕೃತಜ್ಞತೆಯನ್ನು ವ್ಯಕ್ತಪಡಿಸಲು ಕೂಡ ನನ್ನ ಬಾಯಲ್ಲಿ ಮಾತುಗಳಿರಲಿಲ್ಲ. ಕೇವಲ ಕಣ್ಣುಗಳಿಂದ ಇಳಿದ ನೀರು ಗಲ್ಲವನ್ನು ತೊಯ್ಯಿಸುತ್ತಿದ್ದವು. ಕೆಳ ಅಂತಸ್ತಿಗೆ ಇಳಿದು ಬಂದಾಗ ಮೆಟ್ಟಿಲ ಕೆಳಭಾಗದಲ್ಲಿ ಶರತ್ ಮಹಾರಾಜ್ ನಿಂತಿದ್ದರು. ಅವರ ಕಣ್ಣುಗಳು ನನ್ನ ಕಣ್ಣುಗಳನ್ನು ಸಂಧಿಸಿದವು — ಅವರ ಕಣ್ಣುಗಳಲ್ಲಿ ಆಶ್ಚರ್ಯದ ನಗು! ಅವರೆಂದರು, ''ಅಲ್ಲೋ, ಹದಿನಾರಾಣೆ ಕೆಲಸ ಸಾಧಿಸಿಯೇ ಬಿಟ್ಟೆಯಲ್ಲ! ಬ್ರಹ್ಮ, ವಿಷ್ಣು, ಮಹೇಶ್ವರರು ಕೂಡ ಯಾರ ಕೃಪೆಯನ್ನು ಪಡೆಯಲು ಹಗಲು ರಾತ್ರಿಯೆನ್ನದೆ ತಪಸ್ಸು ಮಾಡುವರೋ, ಅದನ್ನು ನೀನು ಸಣ್ಣಪುಟ್ಟ ಕೆಲಸಗಳನ್ನು ಮಾಡಿಯೇ ದೊರಕಿಸಿಕೊಂಡೆ! ಹೋಗು, ಇನ್ನೇಕೆ ಚಿಂತೆ ನಿನಗೆ! ಇನ್ನು ಎಲ್ಲೆಂದರಲ್ಲಿ ಲಾಗ ಹಾಕುತ್ತ ಓಡಾಡು!'' ನಾನು ಇನ್ನೇನು ಹೇಳಲಿ! ಆನಂದ, ಆಹ್ಲಾದಗಳಿಂದ ಇನ್ನೂ ನಾನು ಮೂಕನಾಗಿದ್ದೆ. ಕಣ್ಣೀರು ಮಾತ್ರ ಒಂದೇ ಸಮನೆ ಸುರಿಯುತ್ತಿತ್ತು.

---

೨. ದೀಕ್ಷಾಗುರು ಶಿಷ್ಯಂದಿರಿಗೆ ರುದ್ರಾಕ್ಷಿ ಮಾಲೆಯನ್ನು ನೀಡುವಾಗ, ಒಂದು ಸುತ್ತು ಮಂತ್ರ ಜಪಿಸಿ ಅದನ್ನು ನೀಡುತ್ತಾರೆ. ಇದನ್ನೇ 'ಪವಿತ್ರಗೊಳಿಸುವುದು' ಎನ್ನಲಾಗುತ್ತದೆ. (-ಅನು.)

ಆಗ ಬೇಸಗೆ ಕಾಲ. ಮಾವು, ಹಲಸು ಮಾಗುವ ಸಮಯ, ವಿಪರೀತ ಸೆಕೆ. ಒಂದು ದಿನ ನಾನು ಮೈಮೇಲೆ ಶರಟಿಲ್ಲದೆ ಪುಸ್ತಕಗಳನ್ನು ಪ್ಯಾಕ್ ಮಾಡುತ್ತಿದ್ದೆ. ನನ್ನ ಹೆಗಲಲ್ಲಿ ಹುಣ್ಣಾಗಿತ್ತು. ಶ್ರೀಮಾತೆ ಕರೆಯುತ್ತಿದ್ದಾರೆ ಎಂದು ಯಾರೋ ಹೇಳಿದರು. ಮೈಮೇಲೆ ಬಟ್ಟೆಯಿಲ್ಲದೆ, ಹಾಗೆಯೇ ಶ್ರೀಮಾತೆಯವರ ಬಳಿಗೆ ಹೋದೆ. ಏನೋ ಹೇಳುವುದಕ್ಕಾಗಿ ಹೊರಟ ಶ್ರೀಮಾತೆ, ನನ್ನ ಮುಖದತ್ತ ನೋಡಿದ ಕೂಡಲೇ ನನ್ನ ಹೆಗಲ ಮೇಲಿನ ಹುಣ್ಣನ್ನು ನೋಡಿಬಿಟ್ಟರು. ಅವರೆಂದರು, ''ಚಂದು, ನಿನ್ನ ಹೆಗಲ ಮೇಲೆ ಹೇಗೆ ಹುಣ್ಣಾಯಿತು?'' ನಾನೆಂದೆ, ''ನಡುನಡುವೆ ಪುಸ್ತಕಗಳ ಹೊರೆಯನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಿದ್ದೇನೆ. ಅದು ತರಚಿದ್ದರಿಂದ ಹುಣ್ಣಾಗಿರಬೇಕು ಅನ್ನಿಸುತ್ತದೆ. ಎರಡೇ ದಿನಗಳಲ್ಲಿ ಅದು ಒಣಗಿ ಹೋದೀತು.'' ಶ್ರೀಮಾತೆ, ''ಪಾಂಚು ಎಲ್ಲಿ ಹೋದ?'' ಎಂದು ಕೇಳಿದರು.

''ಕೆಲವು ದಿನಗಳಿಂದ ಪಾಂಚು ಬರುತ್ತಿಲ್ಲ''ಎಂದೆ. ಅದನ್ನು ಕೇಳಿದ ಶ್ರೀಮಾತೆ, ''ಅದಕ್ಕೆ ಬೇರೇನಾದರೂ ವ್ಯವಸ್ಥೆ ಯಾಕೆ ಮಾಡಲಿಲ್ಲ?'' ಎಂದರು. ಆಶ್ರಮದ ಹಣ ಉಳಿಸುವ ಸಲುವಾಗಿ ಹಾಗೆ ಮಾಡಲಿಲ್ಲ ಎಂದೆ. ಅದಕ್ಕೆ ಅವರು, ''ಪಾಂಚು ಬಾರದ ದಿನ ಬೇರೆ ವ್ಯವಸ್ಥೆ ಮಾಡಿಕೋ'' ಎಂದರು. ಹೀಗೆಂದ ಅವರು, ಒಂದು ಸಣ್ಣ ತಟ್ಟೆಯಲ್ಲಿ ತುಸು ಸಾಸಿವೆ ಎಣ್ಣೆಯನ್ನು ಹಾಕಿ, ಏನೋ ಮಂತ್ರವನ್ನು ಜಪಿಸಿ ನನಗೆ ಕೊಟ್ಟು, ''ಈ ಎಣ್ಣೆಯನ್ನು ಹುಣ್ಣಾದ ಜಾಗಕ್ಕೆ ಸ್ವಲ್ಪ ದಿನ ಹಚ್ಚು. ಗುಣವಾಗುವುದು'' ಎಂದರು. ಕೆಲವು ದಿನ ಹಾಗೆ ಅದನ್ನು ಹಚ್ಚಿದ ನಂತರ, ಹುಣ್ಣು ಒಣಗಿಹೋಯಿತು. ಅದಾದ ನಂತರ ಎಂದಿಗೂ ಅಲ್ಲಿ ಹುಣ್ಣಾಗಲಿಲ್ಲ.

ನಾನು ಶ್ರೀಮಾತೆಯವರ ಆದೇಶದಂತೆ ರಮಾಕಾಂತ ಸ್ಟ್ರೀಟಿನ ಸೆಕೆಂಡ್ ಲೇನ್‌ನಲ್ಲಿ[೩] ಬಾಡಿಗೆ ಮನೆ ಮಾಡಿಕೊಂಡು, ಊರಿನಿಂದ ನನ್ನ ಹೆಂಡತಿ ಹಾಗೂ ಮಕ್ಕಳನ್ನು (ಇಂದು ಹಾಗು ಅಮೂಲ್ಯ) ಕರೆದುಕೊಂಡು ಬಂದೆ. ಆದರೆ ಮಾಲೀಕ ತುಸು ಕಠೋರ ವ್ಯಕ್ತಿಯಾಗಿದ್ದ. ಅನೇಕ ಬಾರಿ ಮಕ್ಕಳ ಆಟದ ಸಾಮಾನುಗಳನ್ನು ಅವನಾಗಲಿ, ಅವನ ಕೆಲಸದವರಾಗಲಿ ಮುರಿದು ಹಾಕಿಬಿಡುತ್ತಿದ್ದರು. ನನ್ನ ಮಕ್ಕಳ ಆಟವೆಲ್ಲ ನಿಂತೇಹೋಗುತ್ತಿದ್ದವು. ಅವರು ಎಲ್ಲೆಲ್ಲೋ ತಿರುಗಾಡುತ್ತಿದ್ದರು. ಕೊನೆಗೆ ಅವಸ್ಥೆ ಎಲ್ಲಿಗೆ ಬಂತೆಂದರೆ, ಮನೆ ಮಾಲೀಕನನ್ನು ಕಂಡಕೂಡಲೇ ಮಕ್ಕಳು ಹೆದರಿ ಮನೆಯೊಳಕ್ಕೆ ಸೇರಿಕೊಂಡು ಬಿಡುತ್ತಿದ್ದರು. ಒಂದು ದಿನ ಶ್ರೀಮಾತೆಗೆ ಮಾಲೀಕನ ಈ ವರ್ತನೆಯ ಬಗ್ಗೆ ಹೇಳಿದಾಗ, ಅವರು ತುಂಬಾ ದುಃಖಿತರಾಗಿ ಹೇಳಿದರು, ''ಅಯ್ಯೋ! ಮಕ್ಕಳ ಆಟ ನಿಂತುಹೋಗಿದ್ದಕ್ಕೆ ಅವನಿಗೆ ಸ್ವಲ್ಪವೂ ಸಂಕಟವಾಗುವುದಿಲ್ಲವೆ?'' ಬಳಿಕ ಶರತ್ ಮಹಾರಾಜರನ್ನು ಕರೆದು, ''ಶರತ್, ಚಂದುವಿನ ಮನೆ ಮಾಲೀಕ ಅವನ ಮಕ್ಕಳು ಆಟವಾಡುವುದನ್ನೇ ನಿಲ್ಲಿಸಿಬಿಟ್ಟಿದ್ದಾನಂತೆ. ನೀನು ಚಂದುವಿಗೋಸ್ಕರ ಒಂದು ಸ್ಥಳ ನೋಡಿ, ಅಲ್ಲಿ ಮನೆ ಮಾಡಿ ಒಂದು ಸೂರಿನಡಿ ಮಲಗಲು ವ್ಯವಸ್ಥೆ ಮಾಡಿಕೊಡು. ಮಕ್ಕಳು ಆಟವಾಡಬಾರದಂತೆ, ಇದೇನು ಆಗಿಹೋಯಿತು!'' ಎಂದರು. ಶ್ರೀಮಾತೆಯವರ ಇಚ್ಛೆಯಂತೆ, ಹಾಗೂ ಶರತ್ ಮಹಾರಾಜರ ಬಯಕೆಯಂತೆ ಬೋಸ್‌ಪಾರಾ ಲೇನ್[೪] ನಲ್ಲಿ ಏಳೂವರೆ ಕಾಠಾ[೫] ಜಮೀನನ್ನು ಕೊಂಡುಕೊಂಡದ್ದಾಯಿತು.

*(ಮುಂದುವರಿಯುವುದು)*

---

೩ ಈಗ ಈ ರಸ್ತೆಯನ್ನು 'ನಿವೇದಿತಾ ಲೇನ್' ಎನ್ನುತ್ತಾರೆ (–ಸಂ)
೪ ಈಗ ಈ ರಸ್ತೆ 'ಮಾ ಶಾರದಾ ಸರಣಿ' ಎಂದಾಗಿದೆ. (–ಸಂ)
೫ ಭೂಮಿಯ ಅಳತೆ; ಒಂದು ಕಾಠಾ=೭೨೦ಚದರಡಿ(–ಅನು)

## ಮೊರೆ ಕೇಳಿದ ಶ್ರೀರಾಮಕೃಷ್ಣರು

ಸ್ವಾಮಿ ಬ್ರಹ್ಮಾನಂದರು ಒಂದು ಮಧ್ಯಾಹ್ನ ಬಲರಾಮ ಬಸುವಿನ ಮನೆಯಲ್ಲಿ ಊಟವಾದ ಬಳಿಕ ವಿಶ್ರಾಂತಿ ಪಡೆಯುತ್ತಿದ್ದರು. ಆಗ ಅಲ್ಲಿಗೊಬ್ಬಳು ಬಾಲಕಿ ಬಂದು, ಸ್ವಾಮೀಜಿಯವರನ್ನು ಕಾಣಬೇಕು ಎಂದಳು. ೪ ಗಂಟೆಗೆ ಸ್ವಾಮಿಗಳನ್ನು ಭೇಟಿಯಾಗಬಹುದೆಂದು ಯಾರೋ ತಿಳಿಸಿದರು. ಆದರೂ ಅವಳು ಕೂಡಲೇ ಅವರನ್ನು ಕಾಣಬೇಕು ಎಂದಾಗ, ಸ್ವಾಮೀಜಿ ಅವಳನ್ನು ತಮ್ಮ ಹತ್ತಿರಕ್ಕೆ ಕರೆದರು. ಸ್ವಾಮೀಜಿಯವರ ಕೋಣೆಯಲ್ಲಿ ಅವರನ್ನು ಭೇಟಿಯಾದ ಹುಡುಗಿ, ಅವರನ್ನು ಕಂಡ ಕೂಡಲೇ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಶ್ರೀರಾಮಕೃಷ್ಣರ ಚಿತ್ರವನ್ನು ತೋರಿಸುತ್ತ, ''ಅವರು ನಿಮ್ಮ ಬಳಿಗೆ ಹೋಗಲು ಹೇಳಿದರು'' ಎಂದಳು. ಮಹಾರಾಜ್ ಕರುಣೆ ತೋರಿ, ''ಏನಾಯಿತು, ಹೇಳು ಮಗೂ'' ಎಂದರು. ಆಕೆ ತನ್ನ ಕಥೆಯನ್ನು ಹೇಳಿದಳು:

ಹದಿನಾಲ್ಕನೇ ವಯಸ್ಸಿನಲ್ಲಿ ಅವಳಿಗೆ ವಿವಾಹವಾಗಿತ್ತು. ಎರಡು ವಾರಗಳಲ್ಲೇ ಗಂಡ ತೀರಿಕೊಂಡ. ದುಃಖ ತಡೆಯಲಾಗದೆ ಅವಳು ದೇವರಿಗೆ ಮೊರೆಯಿಟ್ಟಳು: ''ದೇವರೇ, ನಾನೇನು ಮಾಡಲಿ? ನನಗಾರೂ ಗತಿಯಿಲ್ಲ. ನನಗೆ ದಾರಿ ತೋರಿಸು.'' ಒಂದು ವರ್ಷದೊಳಗಾಗಿ, ಒಂದು ದಿನ ರಾತ್ರಿ ಅವಳ ಕನಸಿನಲ್ಲಿ ಶ್ರೀರಾಮಕೃಷ್ಣರು ಕಾಣಿಸಿಕೊಂಡು, ''ಅಳಬೇಡ, ಮಗೂ! ನನ್ನ ಮಗ ಬಾಗ್‌ಬಜಾರಿನಲ್ಲಿ ವಾಸವಾಗಿದ್ದಾನೆ. ಅವನ ಬಳಿಗೆ ಹೋಗು. ಅವನು ಸಹಾಯ ಮಾಡುತ್ತಾನೆ'' ಎಂದರು. ಹಿಂದೆಂದೂ ಆಕೆ ಶ್ರೀರಾಮಕೃಷ್ಣರ ಅಥವಾ ಬ್ರಹ್ಮಾನಂದರ ಬಗ್ಗೆ ಕೇಳಿರಲಿಲ್ಲ.

ಅವಳು ತನ್ನ ತಾಯಿಯ ಮೂಲಕ ಬೇಲೂರು ಮಠದಲ್ಲಿ ವಿಚಾರಿಸಿ, ಸ್ವಾಮಿ ಬ್ರಹ್ಮಾನಂದರು ಬಾಗ್‌ಬಜಾರಿನಲ್ಲಿ ಇರುವುದಾಗಿ ತಿಳಿದು ಅಲ್ಲಿಗೆ ಹೋಗಿದ್ದಳು. ಎರಡು ವರ್ಷಗಳ ಕಾಲ ಅವಳು ಸ್ವಾಮಿ ಬ್ರಹ್ಮಾನಂದರಿಂದ ಮಾರ್ಗದರ್ಶನ ಪಡೆದಳು. ಈ ಅವಧಿಯಲ್ಲಿ ಅವರು ಅವಳಿಗೆ ಮಂತ್ರದೀಕ್ಷೆಯನ್ನೂ ನೀಡಿದರು. ಮುಂದೆ ಅವಳು ಸಂನ್ಯಾಸಿನಿಯಾದಳು.

*'Sri Ramakrishna Saves' ಗ್ರಂಥದಿಂದ*